**ನಾಟಕ ರಚನೆ: ವಿಲಿಯಂ ಶೇಕ್ಸ್‌ಪಿಯರ್**

# ವೆನಿಸ್‌ನ ವರ್ತಕ

**ಪಾತ್ರಗಳ ಪರಿಚಯ :**

**ಷೈಲಾಕ್ :** ಇವನು ಯಹೂದ್ಯರ ಮತಕ್ಕೆ ಸೇರಿದ ಲೇವಾದೇವಿಗಾರ. ಬಹಳ ಬುದ್ಧಿವಂತ ಮತ್ತು ಕುಯುಕ್ತಿವಂತ. ಅವನಿಗೆ ಎಲ್ಲರಲ್ಲೂ ಅಸಡ್ಡೆ. ಆಂಟೋನಿಯೊ ತೆಗೆದುಕೊಂಡ ಸಾಲವನ್ನು ನಿಶ್ಚಿತ ಕಾಲದಲ್ಲಿ ಹಿಂತಿರುಗಿಸದಿದ್ದರೆ ಆಂಟೋನಿಯೊನ ದೇಹದಿಂದ ಒಂದು ಪೌಂಡ್ ಮಾಂಸವನ್ನು ಪಡೆದುಕೊಂಡು ಅವನ ಮೇಲೆ ತನ್ನ ಛಲವನ್ನು ಸಾಧಿಸಿಕೊಳ್ಳಲು ಬಹಳ ಬುದ್ಧಿವಂತಿಕೆಯ ಯೋಜನೆಯನ್ನು ಮಾಡುತ್ತಾನೆ.

**ಆಂಟೋನಿಯೊ :** ಈತ ಒಬ್ಬ ವ್ಯಾಪಾರಿ ಮತ್ತು ಲೇವಾದೇವಿಗಾರ. ತನ್ನ ಸ್ನೇಹಿತ ಬಸಾನಿಯೊನಲ್ಲಿದ್ದ ಪ್ರೀತಿಯಿಂದ ಅವನು ಷೈಲಾಕ್ ಜೊತೆಗೆ ಒಂದು ಒಪ್ಪಂದಕ್ಕೆ ಸಹಿ ಹಾಕುತ್ತಾನೆ. ಷೈಲಾಕ್‌ನನ್ನು ಯಾರೂ ಇಷ್ಟಪಡುವುದಿಲ್ಲ. ಆದರೆ ಆಂಟೋನಿಯೊ ಎಂದರೆ ಎಲ್ಲರಿಗೂ ಪ್ರೀತಿ.

**ಬಸಾನಿಯೊ :** ಇವನೊಬ್ಬ ಗೌರವಾನ್ವಿತ ವ್ಯಕ್ತಿ. ಆಂಟೋನಿಯೊನ ಸ್ನೇಹಿತ. ಇವನು ಆಂಟೋನಿಯೊ ಮೂಲಕ ಷೈಲಾಕ್‌ನಿಂದ ಹಣವನ್ನು ಸಾಲ ಪಡೆದುಕೊಳ್ಳುತ್ತಾನೆ. ಸ್ವಲ್ಪ ಕಾಲವಾದ ಮೇಲೆ ಬಸಾನಿಯೊ ತನ್ನ ಸ್ನೇಹಿತ ಆಂಟೋನಿಯೊನ ನೆರವಿಗೆ ಬಂದರೂ ಇವನಿಂದ ಹೆಚ್ಚು ಸಹಾಯವೇನು ಆಗುವುದಿಲ್ಲ.

**ಪೋರ್ಷಿಯ :** ಇವಳು ಒಬ್ಬ ಶ್ರೀಮಂತಳು. ಇವಳು ಸುಂದರಿ, ಜಾಣೆ ಮತ್ತು ಬುದ್ಧಿವಂತಳು. ಬಸಾನಿಯೊನ ಹೆಂಡತಿ. ಆಂಟೋನಿಯೊನನ್ನು ರಕ್ಷಿಸುವ ಉದ್ದೇಶದಿಂದ ಗಂಡಸು ವಕೀಲನಂತೆ ವೇಷ ಧರಿಸಿ ಷೈಲಾಕ್‌ಗೆ ತನ್ನ ತಪ್ಪು ಅರಿತು, ಆಂಟೋನಿಯೊನನ್ನು ಕ್ಷಮಿಸುವಂತೆ ಉಪಾಯ ಮಾಡುತ್ತಾಳೆ.

**ಗ್ರೇಷಿಯನೊ :** ಬಸಾನಿಯೊನ ಆಪ್ತ ಗೆಳೆಯ.

**ನೆರಿಸ್ಸಾ :** ಬಸಾನಿಯೊನ ಹೆಂಡತಿ. ಪೋರ್ಷಿಯಳ ಆಪ್ತ ಸಖಿ.

---

## ದೃಶ್ಯ – 1

**(ಷೈಲಾಕ್ ಮನೆಯಲ್ಲಿ ಕುಳಿತಿರುತ್ತಾನೆ. ಅಲ್ಲಿಗೆ ಒಬ್ಬ ಸಾಲಗಾರ ಓಡಿ ಬರುತ್ತಾನೆ)**

**ಸಾಲಗಾರ :** ಸ್ವಾಮಿ, ದಯಮಾಡಿ ನನಗೆ ಸಹಾಯ ಮಾಡಿ. ನಾನು ತುಂಬಾ ಕಷ್ಟದಲ್ಲಿದ್ದೇನೆ.

**ಷೈಲಾಕ್ :** ನಾನು ನಿನಗೆ ಸಹಾಯ ಮಾಡಬೇಕೆ? ಯಾವ ರೀತಿಯಲ್ಲಿ ಸಹಾಯ ಮಾಡಬೇಕು?

**ಸಾಲಗಾರ :** ನನಗೆ ಹಣದ ಅವಶ್ಯಕತೆ ಇದೆ. ನೀವು ದಯಮಾಡಿ ಸಾಲ ನೀಡಿ, ಸಮಸ್ಯೆ ಪರಿಹಾರ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಷೈಲಾಕ್ :** (ಕಟುವಾಗಿ) ನಿನಗೆ ತಿಳಿದಿರಲಿ, ನಾನು ಕೊಡುವ ಸಾಲಕ್ಕೆ ದುಬಾರಿ ಬಡ್ಡಿಕೊಡಬೇಕು ಗೊತ್ತೆ?

**ಸಾಲಗಾರ :** ಅಯ್ಯೋ! ಈಗ ತಕ್ಷಣ ನನಗೆ ಹಣದ ಅವಶ್ಯಕತೆ ತುಂಬಾ ಇದೆ. ಆದರೆ ನಾವು ನಿರ್ಗತಿಕರು ಅಷ್ಟು ದುಬಾರಿ ಬಡ್ಡಿ ಕೊಡಲು ಕಷ್ಟವೆನಿಸುತ್ತದೆ.

**ಷೈಲಾಕ್ :** ನನ್ನ ಬಳಿ ಹಣ ಪಡೆದವರಿಗೆಲ್ಲ ನಾನು ಕರುಣೆ ತೋರಿಸುತ್ತಾ ಕೂರುವವನಲ್ಲ.

**ಸಾಲಗಾರ :** ಸರಿ ಹಣ ಕೊಡಿ ಸ್ವಾಮಿ, ನನ್ನ ರಕ್ತ ಬಸಿದಾದರೂ ನಿಮ್ಮ ಬಡ್ಡಿಯನ್ನು ಕೊಡುತ್ತೇನೆ.
(ಸಾಲಗಾರ ಹಣ ಪಡೆದು ತೆರಳುವಾಗ ಇಂತಹ ಕ್ರೂರ ದುಷ್ಟ ವ್ಯಕ್ತಿಯನ್ನು ನಾನು ಎಂದೂ ನೋಡಿರಲಿಲ್ಲ ಎಂದು ಮನಸ್ಸಿನಲ್ಲಿ ಬೈದುಕೊಳ್ಳುತ್ತಾ ತೆರಳುತ್ತಾನೆ.)

---

## ದೃಶ್ಯ – 2

**(ಬಸಾನಿಯೊ ಆಂಟೋನಿಯೊನ ಮನೆಗೆ ಬರುತ್ತಾನೆ)**

**ಬಸಾನಿಯೊ :** ಆಂಟೋನಿಯೊ ನನ್ನ ಐಶ್ವರ್ಯವನ್ನು ಮತ್ತೆ ಪಡೆದುಕೊಳ್ಳಲು ಒಂದು ದಾರಿಯನ್ನು ಕಂಡುಕೊಂಡಿದ್ದೇನೆ.

**ಆಂಟೋನಿಯೊ :** ಯಾವ ದಾರಿ ಗೆಳೆಯ ಬಸಾನಿಯೊ.

**ಬಸಾನಿಯೊ :** ಪೋರ್ಷಿಯ ಎಂಬ ಉದಾತ್ತ ಸ್ವಭಾವದ ಯುವತಿಯೊಬ್ಬಳು ಬಹಳ ಶ್ರೀಮಂತ ತಂದೆಯ ಉತ್ತರಾಧಿಕಾರಿಯಾಗಿದ್ದಳು. ಅವಳಲ್ಲಿ ನನಗೆ ಪ್ರೇಮವುಂಟಾಗಿದೆ.

**ಆಂಟೋನಿಯೊ :** ಓ! ಹೌದೇ, ಗೆಳೆಯ ನಿನಗೆ ಒಳ್ಳೆಯದಾಗಲಿ.

**ಬಸಾನಿಯೊ :** ನನಗೆ ಪೋರ್ಷಿಯಳ ತಂದೆಯ ಪರಿಚಯವಿತ್ತು. ಹಾಗಾಗಿ ನಾನು ಅವರ ಮನೆಗೆ ಆಗಾಗ ಹೋಗಿ ಬರುತ್ತಿದ್ದೆ ಆ ಸಂದರ್ಭದಲ್ಲಿ ನಮ್ಮಿಬ್ಬರ ನಡುವೆ ಪ್ರೇಮ ಅಂಕುರಿಸಿತ್ತು. ಆದರೆ ಪೋರ್ಷಿಯಳ ತಂದೆ ಕೆಲವೇ ದಿನಗಳ ಮೊದಲು ತೀರಿಕೊಂಡರು.

ಮ.ಶಿ.ನೋ

**ಆಂಟೋನಿಯೊ :** ಅಯ್ಯೋ! ಅವರ ಆತ್ಮಕ್ಕೆ ಶಾಂತಿ ದೊರೆಯಲಿ.

**ಬಸಾನಿಯೊ :** ಈಗ ಪೋರ್ಷಿಯಳಿಗೆ ಅವಳ ತಂದೆಯ ಆಸ್ತಿಯೆಲ್ಲ ಬಂದಿದೆ. ನಾನು ಅವಳ ಬಳಿ ಹೋಗಿ ನನ್ನ ಪ್ರೇಮ ನಿವೇದನೆಯನ್ನು ಮಾಡಿಕೊಳ್ಳಬೇಕೆಂದಿದ್ದೇನೆ.

**ಆಂಟೋನಿಯೊ :** ನಿನ್ನ ಯೋಚನೆ ಮತ್ತು ಯೋಜನೆ ಅದ್ಭುತವಾಗಿದೆ ಬಸಾನಿಯೊ.

**ಬಸಾನಿಯೊ :** ಆದರೆ, ಈಗ ಒಂದು ಸಮಸ್ಯೆ ನನ್ನನ್ನು ಕಾಡುತ್ತಿದೆ, ಅದೇನೆಂದರೆ ನಾನು ಪೋರ್ಷಿಯಳನ್ನು ನೋಡಲು ಹೋಗುವಾಗ ಅತ್ಯಂತ ಫ್ಯಾಷನ್ನಿನ ಹೊಸ ಉಡುಪುಗಳನ್ನು ಹಾಕಿಕೊಳ್ಳಲು ಬಯಸುತ್ತಿದ್ದೇನೆ.

**ಆಂಟೋನಿಯೊ :** ನಿನ್ನ ವಿಚಾರ ಸರಿಯಾಗಿದೆ. ಹಾಗೆಯೇ ಮಾಡು.

**ಬಸಾನಿಯೊ :** ಆದರೆ, ನನ್ನ ಬಳಿ ಈಗ ಹಣವಿಲ್ಲ. ದಯಮಾಡಿ ನೀನು ನನಗೆ ಮೂರು ಸಾವಿರ ಡಕೆಟ್‌ಗಳ ಸಾಲವನ್ನು ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಆಂಟೋನಿಯೊ :** ಬಸಾನಿಯೊ ನಿನ್ನ ಮಾತು ಕೇಳಿ ನನಗೆ ಬಹಳ ಸಂತೋಷವಾಯಿತು. ಆದರೆ ಈಗ ನನ್ನ ಬಳಿ ಅಷ್ಟೊಂದು ಹಣವಿಲ್ಲ. ನನ್ನ ಹಲವು ಹಡಗುಗಳು ವ್ಯಾಪಾರದ ಪ್ರಯಾಣವನ್ನು ಮುಗಿಸಿ ಕೆಲವೇ ದಿನಗಳಲ್ಲಿ ಹಿಂದಿರುಗುತ್ತವೆ. ಆಗ ನನ್ನ ಬಳಿ ಬೇಕಾದಷ್ಟು ಹಣ ಶೇಖರವಾಗುತ್ತದೆ. ಆಗ ನಿನಗೆ ಕೊಡಲು ತಕ್ಕಷ್ಟು ಹಣ ನನ್ನಲ್ಲಿ ಇರುತ್ತದೆ. ಆದರೆ ಅಲ್ಲಿಯವರೆಗೆ ಈ ವಿಷಯದಲ್ಲಿ ಕಾಯುವುದು ಬೇಡ. ಆದ್ದರಿಂದ ಷೈಲಾಕ್‌ನ ಬಳಿಗೆ ಹೋಗಿ ಅವನಿಂದ ಸಾಲವನ್ನು ಪಡೆದು ನಿನಗೆ ಕೊಡುತ್ತದೆ.

**ಬಸಾನಿಯೊ :** ಗೆಳಯ, ನಿನ್ನ ಈ ಯೋಜನೆ ನನಗೆ ಅಸಂತೋಷವನ್ನು ಉಂಟುಮಾಡುತ್ತಿದೆ.

**ಆಂಟೋನಿಯೊ :** ಚಿಂತಿಸಬೇಡ ಗೆಳೆಯ, ನನ್ನ ಹಡಗುಗಳು ಶೀಘ್ರದಲ್ಲೇ ಹಿಂದಿರುಗುವುದರಿಂದ ಏನು ಸಮಸ್ಯೆಯಾಗುವುದಿಲ್ಲ ಧೈರ್ಯವಾಗಿರು.

(ಆಂಟೋನಿಯೊ ಮತ್ತು ಬಸಾನಿಯೊ ಷೈಲಾಕ್‌ನ ಮನೆಗೆ ಹೊರಡುತ್ತಾರೆ)

---

## ದೃಶ್ಯ – 3

**(ಷೈಲಾಕ್‌ನ ಮನೆ)**

**ಆಂಟೋನಿಯೊ :** ಷೈಲಾಕ್ ನಿನ್ನಿಂದ ನನಗೊಂದು ಸಹಾಯವಾಗಬೇಕಾಗಿದೆ.

(ಷೈಲಾಕ್ ತಾನು ಆಂಟೋನಿಯೊಗೆ ಕೇಡು ಮಾಡಬೇಕೆಂದು ಬಯಸಿದ್ದ ಸಮಯ ಈಗ ಬಂತೆಂದು ಮನದಲ್ಲೇ ಸಂತೋಷಗೊಂಡನು)

**ಷೈಲಾಕ್ :** ಆಂಟೋನಿಯೊ ಎಲ್ಲರ ಎದುರಿಗೆ ನೀನು ನನ್ನನ್ನು ಅವಮಾನ ಮಾಡಿದ್ದರೂ ನಾವು ಸ್ನೇಹಿತರಾಗಿರಬೇಕೆಂಬುದೆ ನನ್ನ ಬಯಕೆ. ನನ್ನ ಸ್ನೇಹ ಭಾವವನ್ನು ನಿನಗೆ ತೋರಿಸಲು ನಾನು 3,000 ಡಕೆಟ್‌ಗಳನ್ನು ಕೊಡುತ್ತೇನೆ. ಅದರ ಮೇಲೆ ಬಡ್ಡಿಯನ್ನೇ ಕೇಳುವುದಿಲ್ಲ. ಕೇವಲ ನೀನು ನನ್ನ ಜೊತೆಗೆ ಒಬ್ಬ ವಕೀಲನ ಮನೆಗೆ ಬಂದು ಒಂದು ಒಪ್ಪಂದ ಪತ್ರಕ್ಕೆ ಸಹಿ ಮಾಡಿದರೆ ಸಾಕು.

(ಆಂಟೋನಿಯೊಗೆ ತುಂಬಾ ಆಶ್ಚರ್ಯವಾಗುತ್ತದೆ)

**ಆಂಟೋನಿಯೊ :** ಒಪ್ಪಂದದ ಪತ್ರದಲ್ಲಿ ನೀನು ಏನೆಂದು ನಮೂದಿಸುವೆ?

**ಷೈಲಾಕ್ :** ಆಂಟೋನಿಯೊ ನಿರ್ಧರಿಸಿದ ಕಾಲದೊಳಗೆ ಹಣವನ್ನು ಹಿಂದಿರುಗಿಸಲು ಸಾಧ್ಯವಾಗದೆ ಹೋದರೆ ನಿನ್ನ ದೇಹದಿಂದ ನನಗೆ ಬೇಕಾದ ಭಾಗದಿಂದ ಒಂದು ಪೌಂಡು ಮಾಂಸವನ್ನು ತೆಗೆದುಕೊಳ್ಳುತ್ತೇನೆ ಎಂದು ನಮೂದಿಸಲಾಗುತ್ತದೆ.

(ಈ ಸಲಹೆಯನ್ನು ಕೇಳಿ ಬಸಾನಿಯೊಗೆ ದುಃಖವಾಗುತ್ತದೆ)

**ಬಸಾನಿಯೊ :** ಗೆಳೆಯ ಆಂಟೋನಿಯೊ ನನಗಾಗಿ ನೀನು ಅಪಾಯಕ್ಕೆ ಸಿಲುಕಬಾರದೆಂದು ನಿನ್ನಲ್ಲಿ ವಿನಮ್ರವಾಗಿ ಬೇಡಿಕೊಳ್ಳುತ್ತೇನೆ.

**ಆಂಟೋನಿಯೊ :** ನಾನು ಸದಾ ಯಹೂದ್ಯರ ವಿಷಯಕ್ಕೆ ತಪ್ಪು ಅಭಿಪ್ರಾಯ ಇಟ್ಟುಕೊಂಡಿದೆ. ಅವರ ಉದ್ದೇಶಗಳು ಒಳ್ಳೆಯವೆ ಎಂದು ನನಗೆ ಈಗ ಮನವರಿಕೆಯಾಗಿದೆ. ಹಾಗಾಗಿ ನನಗೆ ಒಪ್ಪಂದ ಪತ್ರಕ್ಕೆ ಸಹಿ ಮಾಡಲು ಸಂಪೂರ್ಣ ಒಪ್ಪಿಗೆ ಇದೆ.

(ಷೈಲಾಕ್ ಆಂಟೋನಿಯೊಗೆ ಹಣವನ್ನು ಕೊಡುತ್ತಾನೆ. ಆ ಹಣದಿಂದ ಬಸಾನಿಯೊ ಫ್ಯಾಷನ್ ಉಡುಪುಗಳನ್ನು ಕೊಂಡುಕೊಳ್ಳುತ್ತಾನೆ)

---

## ದೃಶ್ಯ – 4

**(ಬಸಾನಿಯೊ ತನ್ನ ಗೆಳೆಯ ಗ್ರೇಷಿಯನೊ ಜೊತೆ ಪೋರ್ಷಿಯಳ ಮನೆಗೆ ಬರುವನು)**

**ಪೋರ್ಷಿಯ :** ಆತ್ಮೀಯ ಸ್ವಾಗತ ಬಸಾನಿಯೊ. (ಮನೆಯೊಳಗೆ ಪ್ರವೇಶಿಸಿ ಕುರ್ಚಿಯಲ್ಲಿ ಕೂರುತ್ತಾರೆ)

**ಬಸಾನಿಯೊ :** (ತಳಮಳದಿಂದ) ಪೋರ್ಷಿಯ ನಾನು ನಿನ್ನನ್ನು ಮದುವೆಯಾಗಲು ಬಯಸುತ್ತಿದ್ದೇನೆ.

**ಪೋರ್ಷಿಯ :** (ನಗುನಗುತ್ತಾ ನಾಚಿಕೆಯಿಂದ) ಇದಕ್ಕೆ ನನ್ನ ಒಪ್ಪಿಗೆಯೂ ಇದೆ.

**ಬಸಾನಿಯೊ :** ಪೋರ್ಷಿಯ ನನ್ನ ಬಳಿ ಹೆಚ್ಚು ಹಣವಿಲ್ಲ. ಆದರೆ ಒಳ್ಳೇಯ ಕುಟುಂಬಸ್ಥನೆಂಬ ಹೆಸರಿದೆ ಅಷ್ಟೆ.

**ಪೋರ್ಷಿಯ :** ನಾನು ನಿನ್ನ ಹೆಂಡತಿಯಾಗುವ ಭಾಗ್ಯಕ್ಕಾಗಿ ಈಗ ನನ್ನಲ್ಲಿರುವ ಐಶ್ವರ್ಯದ 20ರಷ್ಟು ಶ್ರೀಮಂತಳಾಗಬೇಕಾಗುತ್ತದೆ. (ತನ್ನ ಉಂಗುರವನ್ನು ಕೊಡುತ್ತ) ನನ್ನ ಜೊತೆಗೆ ನನ್ನ ಐಶ್ವರ್ಯವೆಲ್ಲ ನಿನಗೆ ಸೇರಿದ್ದು.

ಮ.ತಿ.ನೋ

**ಗ್ರೇಷಿಯನೊ** : (ಬಸಾನಿಯೊ ಮತ್ತು ಪೋರ್ಷಿಯಳನ್ನು ಉದ್ದೇಶಿಸಿ) ನಿಮ್ಮಿಬ್ಬರಿಗೂ ಅಭಿನಂದನೆಗಳು. ನಿಮ್ಮಲ್ಲಿ ನನ್ನದೊಂದು ನಿವೇದನೆ ಇದೆ. ನಾನು ಮತ್ತು ಪೋರ್ಷಿಯಾಳ ಸಖಿ ನೆರಿಸ್ಸಾ ಇಬ್ಬರೂ ಪ್ರೀತಿಸುತ್ತಿದ್ದೇವೆ. ಹಾಗಾಗಿ ನಾವೂ ಸಹ ಮದುವೆಯಾಗಲು ಬಯಸುತ್ತಿದ್ದೇವೆ.

**ಪೋರ್ಷಿಯ** : ನೆರಿಸ್ಸಾ, ಗ್ರೇಷಿಯನೊ ಹೇಳುತ್ತಿರುವುದು. ಸತ್ಯವೇ?

**ನೆರಿಸ್ಸಾ** : ಹೌದು, ನನಗೆ ಗ್ರೇಷಿಯೊನನ್ನು ಮದುವೆಯಾಗಲು ಬಹಳ ಆಸೆಯಿದೆ. ನಿಮ್ಮಿಬ್ಬರ ಮದುವೆಯ ದಿನವೇ ನಮ್ಮ ಮದುವೆಯಾಗಬೇಕೆಂದು ನನ್ನ ಬಹು ದಿನದ ಬಯಕೆ.

**(ಬಸಾನಿಯೊ ಮತ್ತು ಪೋರ್ಷಿಯ ಗ್ರೇಷಿಯಾನೊ ಮತ್ತು ನೆರಿಸ್ಸಾಳನ್ನು ಅಭಿನಂದಿಸುವರು)**

**(ಎಲ್ಲರೂ ಖುಷಿಯಾಗಿ ಮಾತನಾಡುತ್ತಿದ್ದಾಗ ಅಲ್ಲಿಗೆ ಆತುರವಿಂದ ಒಬ್ಬ ದೂತನು ಆಗಮಿಸುತ್ತಾನೆ)**

**ದೂತ :** ನಿಮ್ಮೆಲ್ಲರಿಗೂ ಒಂದು ದುಃಖದ ಸುದ್ದಿಯಿದೆ. ಅದೇನೆಂದರೆ ಸ್ವಲ್ಪ ಕಾಲದಲ್ಲಿಯೇ ಹಿಂದಿರುಗಿ ಬರುವುದೆಂದು ನಿರೀಕ್ಷಿಸಿದ್ದ ಆಂಟೋನಿಯೊನ ಹಡಗುಗಳೆಲ್ಲವೂ ಸಮುದ್ರದ ಪಾಲಾಗಿದೆ. ಈಗ ಆಂಟೋನಿಯೊ ನಿರ್ಗತಿಕನಾಗಿದ್ದಾನೆ.

**ಬಸಾನಿಯೊ :** ಅಯ್ಯೋ! ದುರ್ವಿಧಿಯೇ ನನ್ನ ಗೆಳೆಯನ ಪರಿಸ್ಥಿತಿ ಹೀಗೇಕಾಯಿತು.

**ಪೋರ್ಷಿಯ :** ಸಮಾಧಾನ ಮಾಡಿಕೊ ಬಸಾನಿಯೊ.

**ಬಸಾನಿಯೊ :** ಪೋರ್ಷಿಯ ಆಂಟೋನಿಯೊ ನನ್ನ ಆತ್ಮೀಯ ಗೆಳೆಯ. ಅವನು ನನ್ನ ಎಲ್ಲಾ ಕಷ್ಟಗಳಲ್ಲೂ ನನಗೆ ಸಹಾಯ ಮಾಡಿದ್ದಾನೆ. ನನಗೆ ಹಣದ ಅವಶ್ಯಕತೆ ಇದ್ದಾಗಲೆಲ್ಲಾ ನನಗೆ ಹಣದ ನೆರವು ನೀಡಿದ್ದಾನೆ. ಆದರೆ ಈಗ ಅವನ ಪರಿಸ್ಥಿತಿ ಹೀಗಾಗಿರುವಾಗ ನಾನು ಹೇಗೆ ಸಮಾಧಾನದಿಂದಿರಲಿ ಹೇಳು.

**ಪೋರ್ಷಿಯ :** ಆಂಟೋನಿಯೊನಂತಹ ಅತ್ಯಂತ ದಯೆಯ ಸ್ವಭಾದವನಿಗೆ ಇಂತಹ ಪರಿಸ್ಥಿತಿ ಒದಗಿರುವುದು ಬಹಳ ದುಃಖಮಯ ವಿಚಾರ.

**ಬಸಾನಿಯೊ : (ಮುಖ ಬಿಳುಚಿಕೊಂಡಿದೆ)** ಆಂಟೋನಿಯೊ ಮತ್ತು ಯಹೂದ್ಯನ ನಡುವೆ ಸಾಲದ ವಿಚಾರವಾಗಿ ಒಂದು ಒಪ್ಪಂದವಾಗಿದೆ. ಈ ಸಾಲವನ್ನು ಅವನು ನನಗಾಗಿ ಮಾಡಿದ್ದಾನೆ. ಈಗ ನನ್ನಿಂದ ಅವನು ಕಷ್ಟದಲ್ಲಿ ಸಿಲುಕಿದಂತಾಗಿದೆ. ಆ ಒಪ್ಪಂದದ ಪ್ರಕಾರ ಆಂಟೋನಿಯೊ ನಿಗಿಧಿತ ಸಮಯಕ್ಕೆ ಯಹೂದ್ಯನಿಗೆ ಹಣ ಹಿಂದಿರುಗಿಸದಿದ್ದರೆ ಆಂಟೋನಿಯೊನ ದೇಹದ ಯಾವ ಭಾಗದಿಂದಲಾದರೂ ಒಂದು ಪೌಂಡ್ ಮಾಂಸವನ್ನು ತೆಗೆದುಕೊಳ್ಳುವ ಹಕ್ಕನ್ನು ಯಹೂದ್ಯ ಪಡೆದಿದ್ದಾನೆ.

**ಪೋರ್ಷಿಯ :** ಓ! ಹಾಗಾದರೆ ನೀವು ಈ ಕೂಡಲೇ ವೆನಿಸಿಗೆ ಹೋಗಿ ಯಹೂದ್ಯನೊಡನೆ ಆಗಿರುವ ಒಪ್ಪಂದದಿಂದ ಬಿಡುಗಡೆಗೊಳಿಸಿ.

**ಬಸಾನಿಯೊ :** ಹಾ! ಪೋರ್ಷಿಯ ಹಾಗೆಯೇ ಮಾಡುತ್ತೇನೆ.

**ಪೋರ್ಷಿಯ :** ಬಸಾನಿಯೊ, ನೀನು ಈ ಕೂಡಲೆ ನನ್ನನ್ನು ಮದುವೆಯಾಗಬೇಕು. ಆಗ ನಿನಗೆ ಕಾನೂನುಬದ್ಧವಾಗಿ ನನ್ನ ಹಣದ ಮೇಲಿನ ಅಧಿಕಾರ ಬರುತ್ತದೆ. ಆ ಹಣವನ್ನು ನೀನು ಆಂಟೋನಿಯೊನನ್ನು ಬಿಡುಗಡೆ ಮಾಡಲು ಬಳಸಬಹುದು. ದಯವಿಟ್ಟು ಈ ಕೂಡಲೆ ಮದುವೆಯಾಗು.

**ಬಸಾನಿಯೊ :** ನೀನು ಹೇಳಿದಂತೆಯೇ ಆಗಲಿ ಪೋರ್ಷಿಯ.

(ಆತುರಾತುರವಾಗಿ ಮದುವೆಯ ಏರ್ಪಾಡು ನಡೆಯುತ್ತದೆ. ಬಸಾನಿಯೊ ಮತ್ತು ಗ್ರೇಷಿಯನೊ ತಮ್ಮ ಪ್ರೇಮದ ವಧುಗಳನ್ನು ಮದುವೆಯಾಗುತ್ತಾರೆ. ಸ್ವಲ್ಪ ಹೊತ್ತಿನಲ್ಲಿಯೇ ಬಸಾನಿಯೊ ಮತ್ತು ಗ್ರೇಷಿಯನೊ ವೆನಿಸಿಗೆ ಹೊರಟರು)

**ಪೋರ್ಷಿಯ :** (ಸ್ವಗತ) ಆಂಟೋನಿಯೊನನ್ನು ಸೆರೆಯಿಂದ ಬಿಡಿಸಲು ನನ್ನ ಗಂಡನೊಬ್ಬನಿಗೆ ತುಂಬಾ ಕಷ್ಟವಾಗುವುದು. ಹಾಗಾಗಿ ಗಂಡನ ಗೆಳೆಯನನ್ನು ಉಳಿಸಲು ನಾನೇ ಏನಾದರೂ ಮಾಡಬೇಕು. ನಾನು ಕಾಲಹರಣ ಮಾಡದೆ ಈ ಕೂಡಲೇ ವೆನಿಸಿಗೆ ಹೊರಡುತ್ತೇನೆ. ಅದಕ್ಕೂ ಮೊದಲು ನನಗೊಂದು ಕೆಲಸವಿದೆ. ನನ್ನ ತಂದೆಯ ಸ್ನೇಹಿತನಾದ ಹಾಗೂ ಕಾನೂನಿನಲ್ಲಿ ಬಹಳ ಗಟ್ಟಿಗನಾದ ಆ ವ್ಯಕ್ತಿಗೆ ನ್ಯಾಯಾಲಯದಲ್ಲಿ ವಕೀಲನಾಗಿ ಆಂಟೋನಿಯೊನನ ಪ್ರಕರಣವನ್ನು ತೆಗೆದುಕೊಂಡು ವಾದ ಮಾಡಲು ಪತ್ರ ಬರೆಯುತ್ತೇನೆ.

---

## ದೃಶ್ಯ – 5

**(ವೆನಿಸ್)**

**ಬಸಾನಿಯೊ : (ವೆನಿಸ್ ತಲುಪಿದ್ದಾನೆ)** ಅಯ್ಯೋ! ದುರ್ವಿಧಿಯೇ ನನ್ನ ಗೆಳೆಯನನ್ನು ಹೀಗೆ ಸೆರೆಮನೆಯಲ್ಲಿ ನೋಡಲು ನನಗೆ ಸಂಕಟವಾಗುತ್ತಿದೆ.

**ಗ್ರೇಷಿಯನೊ :** ಬಸಾನಿಯೊ ನಾವು ಷೈಲಾಕ್‌ನ ಹಣವನ್ನು ಹಿಂದಿರುಗಿಸಿ ಆಂಟೋನಿಯೊ ನನ್ನನ್ನು ಬಿಡುಗಡೆಗೊಳಿಸೋಣ.

**ಬಸಾನಿಯೊ :** ಅದು ಸಾಧ್ಯವಿಲ್ಲ ಗ್ರೇಷಿಯನೊ. ಏಕೆಂದರೆ ಈ ಪ್ರಕರಣದಲ್ಲಿ ಒಂದು ಕಾನೂನಿನ ತೊಡಕಿದೆ. ಜಗತ್ತಿನಲ್ಲಿರುವ ಅಷ್ಟು ಬಂಗಾರವನ್ನು ಕೊಟ್ಟರೂ ನಾವು ಆಂಟೋನಿಯೊನನ್ನು ಬಿಡಿಸಲು ಸಾಧ್ಯವಿಲ್ಲ ಎನಿಸುತ್ತಿದೆ.

**ಗ್ರೇಷಿಯನೊ :** ಏಕೆ ಹಾಗೆ ಹೇಳುತ್ತಿರುವೆ ಬಸಾನಿಯೊ.

**ಬಸಾನಿಯೊ :** ಏಕೆಂದರೆ ಆಂಟೋನಿಯೊ ಹಣವನ್ನು ಹಿಂದಿರುಗಿಸಲು ಸಾಧ್ಯವಾಗದಿದ್ದರೆ ಷೈಲಾಕ್ ಆಂಟೋನಿಯೊನ ದೇಹದ ಯಾವ ಭಾಗದಿಂದಲಾದರೂ ಒಂದು ಪೌಂಡ್ ಮಾಂಸವನ್ನು ತೆಗೆದುಕೊಳ್ಳಬಹುದು ಎಂದು ಒಪ್ಪಂದದ ಪತ್ರದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಹಾಗಾಗಿ ಆಂಟೋನಿಯೊನನ್ನು ಉಳಿಸುವುದು ಯಾರಿಗೂ ಸಾಧ್ಯವಿಲ್ಲ.

**ಗ್ರೇಷಿಯನೊ :** ಹಾಗಾದರೆ ಈ ಒಪ್ಪಂದದ ಪ್ರಕಾರ ಆಂಟೋನಿಯೊ ಸಾಯಲೇಬೇಕು ಎನ್ನುವ ಸ್ಥಿತಿಯಿದೆ ಎಂತಾಯಿತು.

**ಬಸಾನಿಯೊ :** ಈ ಒಪ್ಪಂದದ ವಿಷಯವನ್ನು ತೀರ್ಮಾನಿಸಿ ಯಾವ ಶಿಕ್ಷೆ ಕೊಡಬೇಕು ಎನ್ನುವುದನ್ನು ತೀರ್ಮಾನಿಸಲು ವೆನಿಸಿನ ಡ್ಯೂಕ್‌ನ ಆಸ್ಥಾನದಲ್ಲಿ ದಿನವನ್ನು ಗೊತ್ತು ಮಾಡಲಾಗಿದೆಯಂತೆ.

**ಗ್ರೇಷಿಯನೊ :** ಓ ! ಆಂಟೋನಿಯೊನನ್ನು ಬಿಡಿಸಲು ಬೇರೆ ಮಾರ್ಗವಿದೆಯೇ ಎಂದು ಯೋಚಿಸೋಣ

**(ಬಸಾನಿಯೊ ಮತ್ತು ಗ್ರೇಷಿಯನೊ ಇಬ್ಬರೂ ನಿರ್ಗಮಿಸುತ್ತಾರೆ)**

---

# ದೃಶ್ಯ – 6

**(ಪೋರ್ಷಿಯಳ ಮನೆ)**

**(ಪೋರ್ಷಿಯ ಬರೆದ ಕಾಗದಕ್ಕೆ ಮರುಕಾಗದ ಬರುತ್ತದೆ)**
**(ಪೋರ್ಷಿಯ ವಕೀಲನ ಪತ್ರವನ್ನು ಓದುತ್ತಿದ್ದಾಳೆ. ಆಗ ವಕೀಲನ ಧ್ವನಿ ಪತ್ರ ಓದಿದಂತಾಗುತ್ತದೆ)**

**ಪೋರ್ಷಿಯ :** ಪ್ರಿಯ ಮಗಳೆ ಪೋರ್ಷಿಯ, ನಾನು ವೆನಿಸಿನ ನ್ಯಾಯಾಲಯಕ್ಕೆ ಬಂದು ಈ ಪ್ರಕರಣವನ್ನು ತೆಗೆದುಕೊಂಡು ವಾದ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಈ ಕಾಗದದೊಡನೆ ವಕೀಲನ ಮೇಲುಡುಪು ಹಾಗೂ ನೀನು ಆಂಟೋನಿಯೊನನ್ನು ಬಿಡಿಸಲು ಏನು ಮಾಡಬೇಕು ಎಂಬುದರ ವಿವರದ ಜೊತೆಗೆ ಒಂದು ಪತ್ರವನ್ನು ಇಟ್ಟಿದ್ದೇನೆ. ಅದನ್ನು ವೆನಿಸಿನ ಡ್ಯೂಕ್‌ನಿಗೆ ಕೊಡು. ನಿನಗೆ ಜಯವಾಗಲಿ.

**ಪೋರ್ಷಿಯ** : ನೆರಿಸ್ಸಾ ನೆರಿಸ್ಸಾ ಬಾ ಇಲ್ಲಿ.

**ನೆರಿಸ್ಸಾ** : ಏನು ಹೇಳಿ.

**ಪೋರ್ಷಿಯ** : ನಾನು ವೆನಿಸ್‌ಗೆ ವಕೀಲನ ವೇಷ ತೊಟ್ಟು ಹೊರಡುತ್ತಿದ್ದೇನೆ. ನೀನು ನನ್ನ ಸಹಾಯಕನ ವೇಷದಲ್ಲಿ ಬರುತ್ತೀಯಾ?

**ನೆರಿಸ್ಸಾ** : ಓ ಆಗಲಿ, ಇದು ನನ್ನ ಭಾಗ್ಯವೆಂದೇ ತಿಳಿಯುತ್ತೇನೆ.

**(ಪೋರ್ಷಿಯ ವಕೀಲನ ಉಡುಪಿನಲ್ಲಿ ಮತ್ತು ನೆರಿಸ್ಸಾ ವಕೀಲನ ಗುಮಾಸ್ತನಂತೆ ಮಾರು ವೇಷದಲ್ಲಿ ವೆನಿಸ್ಸಿನ ನ್ಯಾಯಾಲಯಕ್ಕೆ ಹೊರಡುವರು)**

---

# ದೃಶ್ಯ – 7

## (ವೆನಿಸ್‌ನ ನ್ಯಾಯಾಲಯ

( ಎಲ್ಲರೂ ನ್ಯಾಯಾಲಯದಲ್ಲಿ ಸೇರಿ ಡ್ಯೂಕ್‌ನ ಆಗಮನಕ್ಕಾಗಿ ಎದುರು ನೋಡುತ್ತಿದ್ದಾರೆ)
(ಡ್ಯೂಕ್ ಪ್ರವೇಶಿಸಿದಾಗ ಎಲ್ಲರೂ ಎದ್ದು ನಿಂತು ಗೌರವಿಸುತ್ತಾರೆ)

(ವಕೀಲನ ವೇಷದಲ್ಲಿದ್ದ ಪೋರ್ಷಿಯ ತನ್ನ ವಕೀಲನಿಂದ ತಂದ ಪತ್ರವನ್ನು ಡ್ಯೂಕ್‌ನಿಗೆ ನೀಡುತ್ತಾಳೆ)

**ಡ್ಯೂಕ್ :** (ವಕೀಲನ ಪತ್ರ ಓದುತ್ತಾನೆ– ಡ್ಯೂಕ್ ನನ್ನ ಆರೋಗ್ಯ ಸರಿಯಿಲ್ಲದ ಕಾರಣ ನನ್ನ ಪರವಾಗಿ ಇಬ್ಬರು ವಕೀಲರನ್ನು ಕಳುಹಿಸಿದ್ದೇನೆ. ದಯಮಾಡಿ ನಾನು ಗೈರಾಗಿದ್ದಕ್ಕೆ ಕ್ಷಮೆಯಾಚಿಸುತ್ತೇನೆ) ಈ ಪ್ರಕರಣದಲ್ಲಿ ವಾದ ಮಾಡಲು ನಿಮಗೆ ಅನುಮತಿಸುತ್ತಿದ್ದೇನೆ.

**ತರುಣ ವಕೀಲನ ವೇಷದ ಪೋರ್ಷಿಯ :** ಧನ್ಯವಾದಗಳು ಡ್ಯೂಕ್ (ವಾದ ಪ್ರಾರಂಭಿಸುತ್ತಾಳೆ)
ಷೈಲಾಕ್ ದಯೆ ತೋರಿಸಿ ಈ ಒಪ್ಪಂದದ ವಿಷಯವನ್ನು ಸಂಪೂರ್ಣವಾಗಿ ಮರೆತು ಬಿಡಿ.

**ಷೈಲಾಕ್ :** ಕರುಣೆಯು ಅದನ್ನು ನೀಡುವವನಿಗೂ, ಪಡೆಯುವವನಿಗೂ ನೆರವಾಗುತ್ತದೆಯೊ ಹೊರತು ಆಂಟೋನಿಯೊನಿಗೆ ಅಲ್ಲ. ಡ್ಯೂಕ್ ದಯೆಮಾಡಿ ಒಪ್ಪಂದದ ಪತ್ರದಲ್ಲಿದ್ದಂತೆ ಆಂಟೋನಿಯೊನ ದೇಹದಿಂದ ಒಂದು ಪೌಂಡ್ ಮಾಂಸವನ್ನು ತೆಗೆದುಕೊಳ್ಳಲು ನನಗೆ ಅವಕಾಶ ಕೊಡಬೇಕು.

**ತರುಣ ವಕೀಲ(ಪೋರ್ಷಿಯ) :** ಷೈಲಾಕ್ ನಿಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಿ, ಒಂದು ಪೌಂಡ್ ಮಾಂಸದ ಬದಲಿಗೆ ಹಣವನ್ನು ಪಡೆಯಲು ಒಪ್ಪಿಕೊಳ್ಳಿ.

**ಷೈಲಾಕ್ :** (ಹಠದಿಂದ ಹೇಳುವನು) ನನಗೆ ಬೇರೆ ಮಾತೇ ಬೇಡ. ಒಪ್ಪಂದದಂತೆ ನನಗೆ ಒಂದು ಪೌಂಡ್ ಮಾಂಸ ಬೇಕು ಅಷ್ಟೇ.

**ಬಸಾನಿಯೊ :** ಷೈಲಾಕ್ ಈ ವಿಚಾರದ ಬಗ್ಗೆ ನಿನ್ನ ತೀರ್ಮಾನವನ್ನು ಮತ್ತೆ ಯೋಚಿಸು. ಈ ಕ್ಷಣವೇ ನಿನ್ನ ಅಷ್ಟು ಹಣವನ್ನು ನಾನು ಕೊಡಲು ಸಿದ್ಧಸಿದ್ದೇನೆ.

**ಷೈಲಾಕ್ :** ಆಂಟೋನಿಯೊನ ಒಂದು ಪೌಂಡ್ ಮಾಂಸವನ್ನು ಬಿಟ್ಟು ಬೇರೇನನ್ನು ನಾನು ತೆಗೆದುಕೊಳ್ಳಲು ಒಪ್ಪುವುದಿಲ್ಲ. ಏಕೆಂದರೆ ಕಾನೂನಿನ ಪ್ರಕಾರ ಆದ ಒಪ್ಪಂದದಲ್ಲಿ ಏನು ಹೇಳಿದೆಯೋ ಅದರಂತೆ ಆಗುವುದು ಒಳ್ಳೆಯದು.

ಪು.ತಿ.ನೋ

**ತರುಣ ವಕೀಲ (ಪೋರ್ಷಿಯ) :** (ಡ್ಯೂಕ್‌ನ ಕಡೆ ತಿರುಗಿ) ಡ್ಯೂಕ್ ಆಂಟೋನಿಯೊನ ದೇಹದಿಂದ ಷೈಲಾಕ್‌ನು ಒಂದು ಪೌಂಡ್ ಮಾಂಸವನ್ನು ಕತ್ತರಿಸಿಕೊಳ್ಳುವಾಗ ಒಬ್ಬ ವೈದ್ಯನಾದರೂ ಇರಬಹುದೇ? ಏಕೆಂದರೆ ಆ ಸಂದರ್ಭದಲ್ಲಿ ರಕ್ತಸ್ರಾವವಾಗಿ ಆಂಟೋನಿಯೊ ಸತ್ತು ಹೋಗಬಹುದು.

**ಷೈಲಾಕ್ :** ಹೀಗೆಂದು ಒಪ್ಪಂದ ಪತ್ರದಲ್ಲಿ ಬರೆದಿಲ್ಲ. ಆದುದರಿಂದ ಒಪ್ಪಂದದಲ್ಲಿ ಸೂಚಿಸಿರುವ ನನ್ನ ಪಾತ್ರವನ್ನು ನಿರ್ವಹಿಸುವಾಗ ವೈದ್ಯನು ಇರುವಂತಿಲ್ಲ.

**ತರುಣ ವಕೀಲ (ಪೋರ್ಷಿಯ) :** (ಬೇರೆ ದಾರಿ ಕಾಣದೆ) ಕಾನೂನಿಗೆ ಹೊಸ ಅರ್ಥವನ್ನು ಕೊಡಲು ಬರುವುದಿಲ್ಲ. ಷೈಲಾಕ್‌ನಿಗೆ ತನ್ನ ಪೌಂಡ್ ಮಾಂಸವನ್ನು ಕೇಳಲು ಹಕ್ಕಿದೆ.

**ಷೈಲಾಕ್ :** ಇದನ್ನೇ ನಾನು ಮೊದಲಿನಿಂದಲೂ ವಾದಿಸುತ್ತಾ ನಿಮಗೆ ಅರ್ಥೈಯಿಸುತ್ತಿರುವುದು.

**ತರುಣ ವಕೀಲ (ಪೋರ್ಷಿಯ) :** (ಷೈಲಾಕ್ ಕಡೆಗೆ ತಿರುಗಿ) ನಿನ್ನ ಒಂದು ಪೌಂಡ್ ಮಾಂಸವನ್ನು ತೆಗೆದುಕೊ, ಆದರೆ ಒಂದು ಹನಿ ರಕ್ತವೂ ಕೆಳಕ್ಕೆ ಬೀಳಕೂಡದು. ಜ್ಞಾಪಕವಿಟ್ಟುಕೊ, ನೀನು ಸರಿಯಾಗಿ ಒಂದು ಪೌಂಡ್ ಮಾಂಸವನ್ನು ಮಾತ್ರ ತೆಗೆದುಕೊಳ್ಳಬೇಕು. ಒಂದಿಷ್ಟು ಹೆಚ್ಚಾಗಬಾರದು, ಕಡಿಮೆಯಾಗಬಾರದು.

**ಷೈಲಾಕ್ :** (ಕಷ್ಟದ ಸ್ಥಿತಿ ತಲುಪಿದ) ಒಂದು ಹನಿ ರಕ್ತವೂ ಬೀಳದಂತೆ ಆಂಟೋನಿಯೊನ ದೇಹದ ಚೂರು ಕತ್ತರಿಸಿಕೊಳ್ಳುವುದು ಹೇಗೆ? ಸರಿಯಾಗಿ ಒಂದು ಪೌಂಡ್ ಮಾಂಸವನ್ನು ಸ್ವಲ್ಪವೂ ಹೆಚ್ಚು ಕಡಿಮೆಯಿಲ್ಲದೆ ಕತ್ತರಿಸುವುದು ಹೇಗೆ?

**ತರುಣ ವಕೀಲ (ಪೋರ್ಷಿಯ) :** ಷೈಲಾಕ್ ನೀವೇ ಹೇಳಿದಂತೆ, ಒಪ್ಪಂದ ಪತ್ರದಲ್ಲಿ ಒಂದು ಪೌಂಡ್ ಮಾಂಸವನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು ಹೇಳಲಾಗಿದೆ. ಮತ್ತೇನನ್ನು ಹೇಳಲಾಗಿಲ್ಲ.

**ಷೈಲಾಕ್ :** ರಕ್ತ ಸೋರದಂತೆ ಮತ್ತು ಸ್ವಲ್ಪವೂ ಹೆಚ್ಚು ಕಡಿಮೆಯಾಗದಂತೆ ಒಂದು ಪೌಂಡ್ ಮಾಂಸ ಪಡೆಯಲು ಹೇಗೆ ಸಾಧ್ಯ?

**ತರುಣ ವಕೀಲ (ಪೋರ್ಷಿಯ) :** ಇಲ್ಲ ಷೈಲಾಕ್ ನೀನು ಒಪ್ಪಂದದಲ್ಲಿ ಇರುವಂತೆ ಮಾತ್ರ ಮಾಡಬೇಕೇ ಹೊರತು ಒಪ್ಪಂದದ ವಿರುದ್ಧವಾಗಿ ನಡೆದುಕೊಳ್ಳುವಂತಿಲ್ಲ. (ಡ್ಯೂಕ್‌ನ ಕಡೆ ತಿರುಗಿ) ಡ್ಯೂಕ್ ಷೈಲಾಕ್‌ನು ಒಪ್ಪಂದದಲ್ಲಿ ತನ್ನ ಪಾತ್ರದಂತೆ ನಡೆದುಕೊಳ್ಳಲು ಆಗದಿದ್ದರೆ ಅವನ ಆಸ್ತಿಯಲ್ಲಿ ಅರ್ಧಭಾಗ ಆಂಟೋನಿಯೊಗೆ ಹೋಗುತ್ತದೆ ಮತ್ತು ಉಳಿದ ಅರ್ಧಭಾಗವನ್ನು ಷೈಲಾಕ್‌ನಿಗೆ ಶಿಕ್ಷೆ ಎಂದು ವೆನಿಸ್ ರಾಜ್ಯಕ್ಕೆ ಕೊಡಲಾಗುತ್ತದೆ.

**ಷೈಲಾಕ್ :** (ಏನು ಮಾಡಲು ತೋಚದೆ ಕೈ ಹಿಸುಕಿಕೊಳ್ಳುತ್ತಾ, ತಡವರಿಸುತ್ತಾ) ನನ್ನ ಹಣವನ್ನಷ್ಟೆ ಕೊಟ್ಟರೂ ನನಗೆ ಸಾಕು. ಸಮಾಧಾನದಿಂದ ಇರುತ್ತೇನೆ.

**ತರುಣ ವಕೀಲ (ಪೋರ್ಷಿಯ) :** (ಷೈಲಾಕ್‌ನ ಮಾತನ್ನು ಜ್ಞಾಪಿಸುತ್ತಾ) ಆದರೆ ಆಗಲೇ ಷೈಲಾಕ್‌ನೇ ಹೇಳಿದ್ದಂತೆ ಹಣದ ಪ್ರಶ್ನೆ ಇಲ್ಲಿ ಪ್ರಸ್ತುತವಲ್ಲ.

**ಡ್ಯೂಕ್ :** ಒಪ್ಪಂದದ ಪತ್ರದಂತೆ ನ್ಯಾಯಾಲಯ ತೀರ್ಪು ನೀಡುತ್ತಿದೆ. ಒಪ್ಪಂದ ಷೈಲಾಕ್‌ನ ಅರ್ಧ ಆಸ್ತಿಯನ್ನು ಆಂಟೋನಿಯೊಗೆ ನೀಡಬೇಕು. (ಆಂಟೋನಿಯೊ ಮಧ್ಯೆ ಮಾತನಾಡುತ್ತಾನೆ)

**ಆಂಟೋನಿಯೊ :** ಡ್ಯೂಕ್ ನನಗೆ ಕೊಡಬೇಕೆಂದು ತೀರ್ಮಾನಿಸಿದ ಷೈಲಾಕ್‌ನ ಅರ್ಧ ಆಸ್ತಿಯನ್ನು ಅವನ ಮಗಳಿಗೆ ಕೊಟ್ಟರೆ ನನಗೆ ತೃಪ್ತಿ ಆಗುತ್ತದೆ. ಏಕೆಂದರೆ ಷೈಲಾಕ್‌ನ ಮಗಳು ಒಬ್ಬ ಕ್ರೈಸ್ತನನ್ನು ಮದುವೆಯಾಗಿದ್ದಾಳೆ. ಇದರಿಂದ ಷೈಲಾಕ್‌ನು ತನ್ನ ಉಯಿಲಿನಲ್ಲಿ ಅವಳಿಗೆ ಏನೂ ಕೊಟ್ಟಿಲ್ಲ. ಹಾಗಾಗಿ ಆ ಆಸ್ತಿಯನ್ನು ಷೈಲಾಕ್‌ನ ಮಗಳಿಗೆ ಕೊಡಬೇಕೆಂದು ನಿವೇದಿಸಿಕೊಳ್ಳುತ್ತೇನೆ. (ಷೈಲಾಕ್ ಒಂದು ಮಾತನ್ನು ಆಡದ ಸ್ಥಿತಿ ತಲುಪಿ ದುಃಖದಲ್ಲಿ ಕೆಳಗೆ ಕುಸಿದು ಕೂರುತ್ತಾನೆ)

**ಷೈಲಾಕ್ :** (ನ್ಯಾಯ ಸ್ಥಾನವನ್ನು ಕುರಿತು) ನನಗೆ ಆರೋಗ್ಯ ಸರಿಯಿಲ್ಲ. ನಾನು ಹೋಗಲು ಅಪ್ಪಣೆ ಕೊಡಬೇಕು ಹಾಗೂ ಹೊಸದೊಂದು ಒಪ್ಪಂದ ಪತ್ರವನ್ನು ಬರೆದು ನನಗೆ ಕಳುಹಿಸಿಕೊಡಿ. ನಾನು ಅದಕ್ಕೆ ಮನೆಯಲ್ಲಿ ಸಹಿ ಮಾಡುತ್ತೇನೆ.

**ಬಸಾನಿಯೊ :** (ಗ್ರೇಷಿಯನೊ ಜೊತೆ) ಈ ದುಷ್ಟ ಲೇವಾದೇವಿಗಾರನು ತರುಣ ವಕೀಲನ ಬುದ್ಧಿವಂತಿಕೆಯ ಮುಂದೆ ಸೋಲ ಬೇಕಾಯಿತು.

**ಡ್ಯೂಕ್ :** ಆಂಟೋನಿಯೊನನ್ನು ಈ ಕೂಡಲೇ ಬಂಧನದಿಂದ ಮುಕ್ತಗೊಳಿಸಿರಿ. ತರುಣ ವಕೀಲ ನಿನ್ನ ಚತುರ ಬುದ್ಧಿಗೆ ನಾನು ತುಂಬಾ ಸಂತೋಷಗೊಂಡಿದ್ದೇನೆ. ನಿನಗೆ ಉತ್ತಮ ಭವಿಷ್ಯವಿದೆ ಒಳ್ಳೆಯದಾಗಲಿ. ಬಸಾನಿಯೊ ಮತ್ತು ಆಂಟೋನಿಯೊ ನೀವಿಬ್ಬರೂ ತರುಣ ವಕೀಲನಿಗೆ ಮೂರು ಸಾವಿರ ಡಕೆಟ್‌ಗಳನ್ನು ಉಡುಗೊರೆಯಾಗಿ ಕೊಡಬೇಕು.

**ಬಸಾನಿಯೊ :** ಹಾಗೆಯೇ ಆಗಲಿ ಡ್ಯೂಕ್.

**ತರುಣ ವಕೀಲ (ಪೋರ್ಷಿಯ) :** ನನಗೆ ಹಣ ಬೇಡ ಡ್ಯೂಕ್.

(ಈ ಸಂದರ್ಭದಲ್ಲಿ ಬಸಾನಿಯೊ ತನ್ನ ಕೈಗವಸನ್ನು ತೆಗೆದಾಗ ತಮ್ಮ ಮದುವೆಯಲ್ಲಿ ಪೋರ್ಷಿಯ ಅವನಿಗೆ ಕೊಟ್ಟ ಉಂಗುರ ಗಮನಿಸುತ್ತಾಳೆ) ಬಸಾನಿಯೊ ನನಗೆ ಹಣದ ಬದಲಿಗೆ ನಿನ್ನ ಕೈಬೆರಳಿನಲ್ಲಿರುವ ಉಂಗುರವನ್ನು ಉಡುಗೊರೆಯಾಗಿ ಕೊಡುವೆಯಾ?

**ಬಸಾನಿಯೊ :** (ತನ್ನ ಹೆಂಡತಿಯ ಉಡುಗೊರೆ ಉಂಗುರ ನೋಡುತ್ತಾ) ಈ ಉಂಗುರವೇ ಬೇಕೆ?

**ತರುಣ ವಕೀಲ (ಪೋರ್ಷಿಯ):** ಹೌದು, ನಾನು ನಿನ್ನ ಉಂಗುರವನ್ನು ಬಿಟ್ಟು ಮತ್ತೇನನ್ನು ತೆಗೆದುಕೊಳ್ಳುವುದಿಲ್ಲ.

(ಬಸಾನಿಯೊ ತುಂಬಾ ಕಸಿವಿಸಿಕೊಳ್ಳುತ್ತಾನೆ)

ಪು.ತಿ.ನೋ

**ಆಂಟೋನಿಯೊ :** ಬಸಾನಿಯೊ "ಅವನಿಗೆ ಉಂಗುರವನ್ನು ಕೊಟ್ಟು ಬಿಡು, ನಿನ್ನಲ್ಲಿ ನನಗಿರುವ ಪ್ರೀತಿ ಮತ್ತು ಈತನು ನನಗೆ ಮಾಡಿರುವ ಮಹದುಪಕಾರವನ್ನು ನಿನ್ನ ಹೆಂಡತಿಯ ಅಸಮಾಧಾನದೊಡನೆ ತೂಗಿ ನೋಡು"

**ಬಸಾನಿಯೊ :** ನನ್ನ ಗೆಳೆಯನಿಗೆ ಅಪಮಾನ ಮಾಡುವುದು ನನಗೆ ಬೇಕಿಲ್ಲ. ಹಾಗಾಗಿ ಈ ಉಂಗುರವನ್ನು ನಾನು ನಿನಗೆ ಕೊಡಲು ಒಪ್ಪಿದ್ದೇನೆ.

(ಉಂಗುರವನ್ನು ತರುಣ ವಕೀಲನಿಗೆ ಕೊಡುತ್ತಾನೆ)

**ತರುಣ ವಕೀಲನ ಗುಮಾಸ್ತ (ನೆರಿಸ್ಸ) :** (ಗ್ರೇಷಿಯನೊನೊಡನೆ ತಮಾಷೆಮಾಡಿ) ನನಗೆ ಗ್ರೇಷಿಯನೊ ತೊಟ್ಟಿರುವ ಉಂಗುರ ಬೇಕು.

(ಗ್ರೇಷಿಯನೊ ಬೇರೆ ದಾರಿಯಿಲ್ಲದೆ ಕೊಡುತ್ತಾನೆ. ನೆರಿಸ್ಸಾ ಮತ್ತು ಪೋರ್ಷಿಯ ಗಂಡಂದಿರೊಡನೆ ಆದ ತಮಾಷೆಗೆ ನಗುತ್ತಾ ಆಸ್ಥಾನದಿಂದ ಹೊರಡುವರು)

# ದೃಶ್ಯ – 8

**(ಪೋರ್ಷಿಯಯನ ಮನೆ)**

**(ಪೋರ್ಷಿಯ ಮತ್ತು ನೆರಿಸ್ಸಾ ತಮ್ಮ ನಿಜ ಉಡುಪಿನಲ್ಲಿದ್ದಾರೆ. ತಮ್ಮ ಗಂಡಂದಿರಿಗಾಗಿ ದಾರಿ ಕಾಯುತ್ತಿದ್ದಾರೆ)**

**(ಬಸಾನಿಯೊ, ಗ್ರೇಷಿಯನೊ, ಆಂಟೋನಿಯರ ಆಗಮನ, ನೆರಿಸ್ಸಾ ಕೊಠಡಿಯೊಳಗೆ ತೆರಳುತ್ತಾಳೆ. ಅವಳನ್ನು ಗ್ರೇಷಿಯನೊ ಹಿಂಬಾಲಿಸುತ್ತಾನೆ)**

**ಬಸಾನಿಯೊ :** ಆಂಟೋನಿಯೊ ಇವಳು ನನ್ನ ಹೆಂಡತಿ ಪೋರ್ಷಿಯ.

(ಗ್ರೇಷಿಯನೊ ಮತ್ತು ನೆರಿಸ್ಸರ ನಡುವಿನ ಜಗಳ ಕೇಳುತ್ತದೆ)

**ಆಂಟೋನಿಯೊ :** ನೆರಿಸ್ಸ, ಗ್ರೇಷಿಯನೊ ನಿಮ್ಮ ಈ ವಿರಸಕ್ಕೆ ಕಾರಣವೇನು?

**ನೆರಿಸ್ಸ :** ನಾನು ಗ್ರೇಷಿಯನೊಗೆ ಉಂಗುರವನ್ನು ಉಡುಗೊರೆಯಾಗಿ ನೀಡಿದಾಗ ಅದನ್ನು ತನ್ನಿಂದ ದೂರ ಮಾಡುವುದಿಲ್ಲ ಎಂದು ಹೇಳಿದ್ದ ಆದರೆ ಗ್ರೇಷಿಯನೊನ ಬಳಿ ಈಗ ಆ ಉಂಗುರವಿದೆ.

(ಗ್ರೇಷಿಯನೊ ಉಂಗುರದ ಇಡೀ ಕಥೆಯನ್ನು ಹೇಳುತ್ತಾನೆ)

**ಪೋರ್ಷಿಯ : (ಕಟುವಾಗಿ ಕೋಪದಿಂದ)** ಏನೇ ಆಗಲಿ ಗ್ರೇಷಿಯನೊ ಉಂಗುರವನ್ನು ಕೊಟ್ಟುಬಿಟ್ಟದ್ದು ತಪ್ಪು. ನನ್ನ ಗಂಡ ಇಂತಹ ತಪ್ಪನ್ನು ಮಾಡುವುದೇ ಇಲ್ಲ.

(ಗ್ರೇಷಿಯನೊ ತನಗೆ ಬಂದಿರುವ ಆಕ್ಷೇಪಣೆಯನ್ನು ತಪ್ಪಿಸಿಕೊಳ್ಳಲು)

**ಗ್ರೇಷಿಯನೊ :** ಆದರೆ ಮೊದಲು ಉಂಗುರವನ್ನು ಕೊಟ್ಟದ್ದು ಬಸಾನಿಯೊ ಅವನು ಕೊಟ್ಟಿದ್ದರಿಂದ ನಾನು ಉಂಗುರ ಕೊಟ್ಟೆ ಅಷ್ಟೆ.

**ಪೋರ್ಷಿಯ :** (ತುಂಬಾ ಕೋಪಗೊಂಡವಳಂತೆ) ಬಸಾನಿಯೊ ನೀನು ಇಂತಹ ತಪ್ಪು ಎಸಗುವೆ ಎಂದು ನಾನು ಬಯಸಿರಲಿಲ್ಲ.

(ಬಸಾನಿಯೊ ಪೋರ್ಷಿಯಾಳನ್ನು ಸಮಾಧಾನಿಸಲು ಪ್ರಯತ್ನಿಸುತ್ತಾನೆ. ಇಡೀ ಕಥೆ ಹೇಳುತ್ತಾನೆ)

**ಬಸಾನಿಯೊ :** ಪೋರ್ಷಿಯ ನಡೆದದ್ದು ಇಷ್ಟು.

**ಪೋರ್ಷಿಯ :** ಆದರೆ ನನಗೆ ನಿನ್ನ ವಿವರಣೆ ಬೇಕಿಲ್ಲ.

**ಆಂಟೋನಿಯೊ :** (ಬೇಸರದಿಂದ) ಈ ವಿರಸಕ್ಕೆ ನಾನೇ ಕಾರಣ, ನಾನು ಇಲ್ಲದಿದ್ದರೆ ನೀವು ದಂಪತಿಗಳು ಹೀಗೆ ಜಗಳವಾಡುತ್ತಿರಲಿಲ್ಲ.

**ಬಸಾನಿಯೊ :** ಇನ್ನು ಮುಂದೆ ಯಾವಾಗಲೂ ಪೋರ್ಷಿಯೊಳಿಗೆ ನಿಷ್ಠನಾಗಿರುತ್ತೇನೆ. ಈಗ ನಡೆದಿರುವುದಕ್ಕೆಲ್ಲಾ ನಾನೇ ಹೊಣೆಗಾರನಾಗಿರುತ್ತೇನೆ.

**ಪೋರ್ಷಿಯ :** (ಆಂಟೋನಿಯೊಗೆ 1 ಉಂಗುರ ಕೊಡುತ್ತ) ಇದನ್ನು ನಿನ್ನ ಗೆಳೆಯನಿಗೆ ಕೊಟ್ಟು ಇದನ್ನು ಇನ್ನೆಂದಿಗೂ ಯಾರಿಗೂ ಕೊಡದಂತೆ ಹೇಳು.

**ಬಸಾನಿಯೊ :** (ಉಂಗುರ ನೋಡಿ ಆಶ್ಚರ್ಯಗೊಂಡು) ಇದು ನಾನು ಆಂಟೋನಿಯೊ ಪರವಾಗಿ ವಾದಿಸಿ ಅವನ ಪ್ರಾಣವನ್ನುಳಿಸಿದ ಕಾನೂನಿನ ತಜ್ಞ ತರುಣ ವಕೀಲನಿಗೆ ಕೊಟ್ಟ ಉಂಗುರವೇ ಆಗಿದೆ.

ಹಾಗಾದರೆ, ಪೋರ್ಷಿಯ ತರುಣ ವಕೀಲನ ವೇಷದಲ್ಲಿ ಇದ್ದದ್ದು, ನೀನೆಯೇ? ನನ್ನೊಡನೆ ಈ ರೀತಿ ತಮಾಷೆ ಮಾಡಿರುವೆಲ್ಲ. ಹೋಗಲಿ ಬಿಡು ನಿನ್ನಿಂದ ನನ್ನ ಪ್ರಾಣ ಸ್ನೇಹಿತ ನನಗೆ ಮತ್ತೆ ಸಿಕ್ಕಿದ್ದಾನೆ. ಅದಕ್ಕಾಗಿ ನಿನಗೆ ನಾನು ಎಂದಿಗೂ ಚಿರಋಣಿ.

(ಎಲ್ಲರೂ ಖುಷಿ ಪಡುತ್ತಾರೆ)

**(ದೂತನ ಪ್ರವೇಶ)**

**ದೂತ :** ನಿಮ್ಮೆಲ್ಲರಿಗೂ ಒಂದು ಶುಭ ಸುದ್ದಿಯಿದೆ. ಕಳೆದು ಹೋಗಿದ್ದ ಆಂಟೋನಿಯೊನ ಹಡಗುಗಳೆಲ್ಲ ಬಂದರಿಗೆ ಬಂದಿವೆ.

**ಬಸಾನಿಯೊ :** ಓ ಹಾಗಾದರೆ ನನ್ನ ಗೆಳೆಯ ಮತ್ತೆ ಶ್ರೀಮಂತನಾದನು. **(ಎಲ್ಲರೂ ಸಂಭ್ರಮಿಸುತ್ತಾರೆ)**

* * * * * * * * * * * * *